ಶ್ರೀ ಟಿ.ಬಿ. ಜಯಚಂದ್ರ : (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನಾ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶಿರಗಾಂವ ಹಾಗೂ ರಾಯಭಾಗ ತಾಲ್ಲುಕಿನ ಹಿಡಕಲ್ ಮತ್ತು ಖನದಾಳ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಪ್ರಸ್ತಾವನೆಗಳು ಬಂದಿರುತ್ತವೆ.

ರಾಜ್ಯದಲ್ಲಿ 717 ಪಶುವೈದ್ಯ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಅರ್ಹ ಪಶುವೈದ್ಯ ಪದವೀಧರರ ಕೊರತೆ ಇರುವುದರಿಂದ, ಹೊಸದಾಗಿ ಪಶುವೈದ್ಯ ಸಂಸ್ಥೆಗಳನ್ನು ತೆರೆಯುವ ಪ್ರಸ್ತಾವನೆಯನ್ನು ಸರ್ಕಾರವು ತಾತ್ಕಾಲಿಕವಾಗಿ ಮುಂದೂಡಿದೆ.

ಆ) ಉದ್ಭವಿಸುವುದಿಲ್ಲ.

ಪಶು ಚಿಕಿತ್ಸೆಯಲ್ಲಿ ಖಾಲಿ ಹುದ್ದೆಗಳು

569 (1032) ಶ್ರೀ ನಾಗೇಂದ್ರ ಬಿ. (ಕೂಡ್ಲಿಗಿ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾಲಯಗಳಿಗೆ ಮಂಜೂರಾಗಿರುವ ವಿವಿಧ ದರ್ಜೆಯ ಹುದ್ದೆಗಳೆಷ್ಟು; (ಸಂಪೂರ್ಣ ವಿವರ ನೀಡುವುದು)

ಆ) ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳಲ್ಲಿ ಭರ್ತಿ ಮಾಡಿರುವ ಹುದ್ದೆಗಳೆಷ್ಟು; ಖಾಲಿಯಿರುವ ಹುದ್ದೆಗಳೆಷ್ಟು; (ವಿವರ ನೀಡುವುದು)

ಇ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ;

ಈ) ಹಾಗಿದ್ದಲ್ಲಿ ಯಾವಾಗ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು? (ಪೂರ್ಣ ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ : (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನಾ ಸಚಿವರು) :–

ಅ) ಮತ್ತು ಆ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಪಶು ಚಿಕಿತ್ಸಾಲಯಗಳಿಗೆ ಒಟ್ಟು 81 ವಿವಿಧ ದರ್ಜೆಯ ಹುದ್ದೆಗಳು ಮಂಜೂರು ಆಗಿದ್ದು, ಅವುಗಳಲ್ಲಿ 54 ಹುದ್ದೆಗಳು ಭರ್ತಿಯಾಗಿದ್ದು, 27 ಹುದ್ದೆಗಳು ಖಾಲಿ ಇರುತ್ತವೆ. ವಿವರ ಕೆಳಕಂಡಂತಿದೆ.

ಕ್ರ.ಸಂ.	ವೃಂದವಾರು ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ಭರ್ತಿ ಹುದ್ದೆಗಳು	ಖಾಲಿ ಹುದ್ದೆಗಳು
1	ಸಹಾಯಕ ನಿರ್ದೇಶಕರು	02	02	–
2	ಪಶುವೈದ್ಯಾಧಿಕಾರಿ	16	07	09
3	ಜಾನುವಾರು ಅಧಿಕಾರಿ	02	–	02
4	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	09	09	–
5	ಪಶುವೈದ್ಯಕೀಯ ಪರೀಕ್ಷಕರು	09	08	01
6	ಪಶುವೈದ್ಯಕೀಯ ಸಹಾಯಕರು	04	01	03
7	ದ್ವಿತೀಯ ದರ್ಜೆ ಸಹಾಯಕರು	01	01	–
8	ವಾಹನ ಚಾಲಕರು	01	–	01
9	ಡಿ–ದರ್ಜೆ ನೌಕರರು	37	26	11
	ಒಟ್ಟು	**81**	**54**	**27**

ಇ) ಹೌದು

ಈ) ಖಾಲಿ ಇರುವ 27 ವಿವಿಧ ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.

ಕ್ರ.ಸಂ.	ವೃಂದವಾರು ಹುದ್ದೆಗಳ ವಿವರ	ಖಾಲಿ ಹುದ್ದೆಗಳು	ಕ್ರಮ
1	ಪಶುವೈದ್ಯಾಧಿಕಾರಿ	09	391 – ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮದಡಿ ಭರ್ತಿ ಮಾಡುವ ಸಂದರ್ಭದಲ್ಲಿ ಈ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
2	ಜಾನುವಾರು ಅಧಿಕಾರಿ	02	ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಈ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
3	ಪಶುವೈದ್ಯಕೀಯ ಪರೀಕ್ಷಕರು	01	ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ನೇರನೇಮಕಾತಿ ಮತ್ತು ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

4	ಪಶುವೈದ್ಯಕೀಯ ಸಹಾಯಕರು	03	642 – ಹುದ್ದೆಗಳ ನೇರನೇಮಕಾತಿ ಮಾಡುವಾಗ ಹಾಗೂ ಡಿ–ದರ್ಜೆ ಹುದ್ದೆಯಿಂದ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.
5	ವಾಹನ ಚಾಲಕರು	01	ಡಿ–ದರ್ಜೆ ಹುದ್ದೆಯಿಂದ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಹಾಗೂ ಅನುಕಂಪಾರ್ಥ ನೇಮಕಾತಿ ಮಾಡುವ ಸಂದರ್ಭದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.
6	ಡಿ–ದರ್ಜೆ ನೌಕರರು	11	ಖಾಲಿ ಇರುವ 2672 'ಡಿ' ದರ್ಜೆ ನೌಕರರ ಹುದ್ದೆಗಳ ಪೈಕಿ 1500 'ಡಿ' ದರ್ಜೆ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ ಹಾಗೂ ಅನುಕಂಪಾರ್ಥ ನೌಕರಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.